ಆ) ಹೇಮಾವತಿ ನಾಲಾ ವಲಯದ ವ್ಯಾಪ್ತಿಯಲ್ಲಿನ ತುಮಕೂರು ಮತ್ತು ನೆರೆ ಜಿಲ್ಲೆಗಳಲ್ಲಿನ ನೀರಾವರಿ ನಾಲಾ ಕೆಲಸಗಳಿಗೆ, ಈವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು ?

ಇ) ತುಮಕೂರು ಜಿಲ್ಲೆಯ ಭೂಮಿಗಳಿಗೆ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ನೀರಾವರಿ ಸೌಲಭ್ಯ ನೀಡುವ ಕಾರ್ಯಕ್ರಮವೇನಾದರೂ ಹಾಕಿಕೊಳ್ಳಲಾಗಿದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ನಾಲಾ ವಲಯ ಏಪ್ರಿಲ್ ೮೭ರಲ್ಲಿ ಪ್ರಾರಂಭವಾದಂದಿನಿಂದ ಜನವರಿ ೯೦ರ ಅಂತ್ಯದವರೆಗೆ ೩೧.೮೬ ಕೋಟಿ ರೂ.ಗಳಷ್ಟು ಬಿಡುಗಡೆ ಮಾಡಲಾಗಿದೆ.

ಇ) ಎಂಟನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಸೌಲಭ್ಯ ಒದಗಿಸುವ ಕಾರ್ಯಕ್ರಮವಿದೆ.

೧೨.೦೦ ಮಧ್ಯಾಹ್ನ

ಸಭೆಯ ಮುಂದಿಡಲಾದ್ದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆಗಳ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಪೂರ್ವ ಮುಖ್ಯಮಂತ್ರಿಗಳ ಪರವಾಗಿ ಅವರ ಪರಿಸರದ ಮುಂದಿರುವ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡಲು ತಮ್ಮ ಅನುಮತಿ ಕೋರುತ್ತೇನೆ.

೧೯೫೫ನೇ ಇಸವಿ ಕರ್ನಾಟಕ ಅಬಕಾರಿ ಶಾಸನದ ೭೧ನೇ ಕಲಮಿನ ಮೇರೆಗೆ

(೧) ೧೯೮೯ನೇ ಇಸವಿಯ ಕರ್ನಾಟಕ ಅಬಕಾರಿ (ಬಟ್ಟಿ, ಕಾರ್ಖಾನೆ ಹಾಗೂ ಉಗ್ರಾಣ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ: ೧೩-೯-೧೯೮೯ ರಂದು ಹೊರಡಿಸಲಾದ ಹೆಚ್.ಡಿ. ೨೫ ಪಿ.ಇ.ಎಸ್. ೮೯ನೇ ಕ್ರಮಾಂಕದ ಅಧಿಸೂಚನೆ.

(೨) ೧೯೮೯ನೇ ಇಸವಿಯ ಕರ್ನಾಟಕ ಅಬಕಾರಿ (ಬ್ರಿವರಿ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ. ೧೩-೯-೧೯೮೯ರಂದು ಹೊರಡಿಸಲಾದ ಹೆಚ್.ಡಿ. ೨೬ ಪಿ.ಇ.ಎಸ್. ೮೯ನೇ ಕ್ರಮಾಂಕದ ಅಧಿಸೂಚನೆ.

(೩) ೧೯೮೯ನೇ ಇಸವಿಯ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಮಧ್ಯಸಾರ ತಯಾರಿಕೆ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ. ೧೩-೯-೧೯೮೯ರಂದು ಹೊರಡಿಸಲಾದ ಹೆಚ್.ಡಿ. ೨೭ ಪಿ.ಇ.ಎಸ್. ೮೯ನೇ ಕ್ರಮಾಂಕದ ಅಧಿಸೂಚನೆ.

(೪) ೧೯೮೯ನೇ ಇಸವಿಯ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯಸಾರ ಮೂರಾಟ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ. ೧೩-೯-೧೯೮೯ ರಂದು ಹೊರಡಿಸಲಾದ ಹೆಚ್.ಡಿ. ೨೮ ಪಿ.ಇ.ಎಸ್.೮೯ನೇ ಕ್ರಮಾಂಕದ ಅಧಿಸೂಚನೆ.

(೫) ೧೯೮೯ನೇ ಇಸವಿ ಕರ್ನಾಟಕ ಅಬಕಾರಿ (ಲಿಕ್ಕರ್ ಬಾಟ್ಲಿಂಗ್) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ. ೧೩-೯-೧೯೮೯ರಂದು ಹೊರಡಿಸಲಾದ ಹೆಚ್.ಡಿ. ೨೯ ಪಿ.ಇ.ಎಸ್. ೮೯ನೇ ಕ್ರಮಾಂಕದ ಅಧಿಸೂಚನೆ.

(೬) ೧೯೮೬-೮೭ನೇ ಸಾಲಿನ ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ ಅವರ ೫೪ನೇ ವಾರ್ಷಿಕ ವರದಿ ಹಾಗೂ

(೭) ೧೯೮೭-೮೮ನೇ ಸಾಲಿನ ಕರ್ನಾಟಕ ರಾಜ್ಯ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತದ ೧೧ನೇ ವಾರ್ಷಿಕ ವರದಿ.

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮುಂದಿಡಲು ಅನುಮತಿ ಕೋರುತ್ತೇನೆ.

೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೨೭ (೧)ನೇ ಕಲಮಿನ ಪ್ರಕಾರ ಸರ್ಕಾರದ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಲ್ಲಿ ಸಹಕಾರ ಸಂಘಗಳಿಗೆ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಅಥವಾ ಚುನಾವಣೆಯನ್ನು ರದ್ದುಪಡಿಸಲು ಅಥವಾ ಮುಂದೂಡುವ ಬಗ್ಗೆ ದಿನಾಂಕ. ೫–೨–೧೯೬೦ ರಂದು ಹೊರಡಿಸಿದ ಸಿ.ಎಂ.ಡಬ್ಲ್ಯೂ ೧೬೪ ಸಿ.ಎಲ್.ಎಂ.ನೇ ಕ್ರಮಾಂಕದ ಆದೇಶ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಕರ್ನಾಟಕ ಪವರ್ ಕಾರ್ಪೋರೇಷನ್ನಿನ ಎಂಜಿನಿಯರುಗಳ ಸಂಘದವರು ಸ್ಟ್ರೈಕ್ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ಕೊಟ್ಟಿರುವುದು.

† ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನ ನಡೆಯುತ್ತಿರುವಾಗ...

ಅಧ್ಯಕ್ಷರು.— ನಾನು ತಮ್ಮನ್ನು ಕರೆದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈ ತಿಂಗಳು ೨೪ನೇ ತಾರೀಖು ಕರ್ನಾಟಕ ಪವರ್ ಕಾರ್ಪೋರೇಷನ್ನಿನ ಪದವೀಧರ ಇಂಜಿನಿಯರುಗಳ ಸಂಘದವರು ಸ್ಟ್ರೈಕ್ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಈ ಸಂದರ್ಭದಲ್ಲಿ ಈ ಕಾರ್ಪೋರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಆಗತ್ಯಸೇವಾ ನಿರ್ವಹಣಾ ಕಾಯ್ದೆಯ ಅನ್ವಯ ಈ ಮುಷ್ಕರವನ್ನು ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಇಂತಹ ಮಹತ್ವದ ವಿಚಾರದ ಬಗ್ಗೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈ ತೀರ್ಮಾನವನ್ನು ಅವರು ತೆಗೆದುಕೊಂಡಿದ್ದಾರೆ. ಈ ಮುಷ್ಕರ ನಡೆದರೆ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ಕೆ.ಪಿ.ಸಿ.ಗೆ ಲುಕ್ಸಾನು ಆಗುತ್ತದೆ ಮತ್ತು ೧೧ ಕೋಟಿ ಕೈಗಾರಿಕಾ ಕ್ಷೇತ್ರದಲ್ಲಿ ನಷ್ಟವಾಗುತ್ತದೆ, ಅಂದರೆ ಒಟ್ಟು ೧೨ ಕೋಟಿ ರೂಪಾಯಿ ಒಂದು ದಿವಸಕ್ಕೆ ಲುಕ್ಸಾನು ಆಗುತ್ತದೆ ಎಂಬ ಮಾತನ್ನು ಮ್ಯಾನೇಜಿಂಗ್ ಡೈರೆಕ್ಟರ್ ಅವರು ಹೇಳಿದ್ದಾರೆ. ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ನಮ್ಮನ್ನು ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನದ ಮುಖಾಂತರ ಹೇಳಿಕೆಯನ್ನು ಕೊಡತಕ್ಕಂಥ ಸತ್‌ಸಂಪ್ರದಾಯ ನಮ್ಮಲ್ಲಿ ಇರುವುದು ತಮಗೂ ಸಹ ತಿಳಿದಿರುವ ವಿಷಯ. ದಯವಿಟ್ಟು ಮಾನ್ಯ ಅರ್ಥಮಂತ್ರಿಗಳು ಇಲ್ಲಿ ಇದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ವ್ಯವಸ್ಥಾಪಕ ನಿರ್ದೇಶಕರು ತಮ್ಮ ಹೇಳಿಕೆಯನ್ನು ಕೊಟ್ಟು ಸಭೆ ನಡೆಯುವಾಗ ಅಗೌರವ ಮಾಡಿದ್ದಾರೆ. ಸಂಬಂಧಪಟ್ಟ ಸಚಿವರಿಗೆ ಅವರ ಬಗ್ಗೆ ಎಷ್ಟೇ ವೈಯಕ್ತಿಕವಾದ ವಿಶ್ವಾಸ ಇರಬಹುದು. ಆದರೆ ಸಭೆಗೆ ಅಗೌರವ ಆಗಿರುವುದರಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಒಬ್ಬ ಅಧಿಕಾರಿ, ವ್ಯವಸ್ಥಾಪಕ ನಿರ್ದೇಶಕ ಈ ರೀತಿ ಹೇಳಿಕೆ ಕೊಡುವುದು ಸಚಿವರ ಗಮನಕ್ಕೆ ಬಂದಿಲ್ಲವೆ ? ಸದನ ನಡೆಯುವಾಗ ಈ ರೀತಿ ಹೇಳಿಕೆ ಕೊಡುವುದು ಸಭೆಗೆ ಅಗೌರವ ಮಾಡಿದಂತೆ ನೀತಿಯಾಗಿದೆ. ಆದ್ದರಿಂದ ನಾನು ಮಾನ್ಯ ಲೋಕೋಪಯೋಗಿ ಸಚಿವರು, ವಿದ್ಯುಚ್ಛಕ್ತಿ ಸಚಿವರನ್ನು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ. ಅಧಿಕಾರಿಗಳು ಮಾಡಿರುವ ಹೇಳಿಕೆಯಿಂದ ಇಡೀ ಸಭೆಗೇ ಅಗೌರವವಾಗಿದೆ. ಆದ್ದರಿಂದ ತಾವು ಕೂಡಲೇ ರಾಜೀನಾಮೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ...

ಶ್ರೀ ಪಿ. ಜಿ. ಆರ್. ಸಿಂಧ್ಯ.— ತಾವು ಏನಾದರೂ ಹೇಳಿಕೆ ಕೊಡಿ. ನಮ್ಮನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.— ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಒಬ್ಬ ಅಧಿಕಾರಿ ಹೀಗೆ ಏಕಾಏಕಿ ಶೀರ್ಮಾನ ಕೊಡತಕ್ಕದ್ದು ಈ ಸಭೆಗೆ ಮಾಡಿರುವ ಅಗೌರವ. ಸರ್ಕಾರಕ್ಕೆ ಅಗೌರವ ಎಂದು ನಾನು ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.